**ಸಿಸಿ ಸಂಖ್ಯೆ: -1418/2025**

ಪಿ.ಡಬ್ಲ್ಯೂ **:-1-**ರತ್ನಮ್ಮ

ದಿನಾಂಕ: **15-07-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು **:-** ಆರೋಪಿ ಪರ ವಕೀಲರಾದ ಶ್ರೀ. ಸಿ ಎಂ ವಕೀಲರಿಂದ **:-**

1.ಆರೋಪಿ ಮತ್ತು ನನ್ನ ಅಳಿಯ ರಾಜು ಇಬ್ಬರೂ ಸ್ನೇಹಿತರಾಗಿದ್ದರಿಂದ ಅವರ ಮದ್ಯದ ವ್ಯವಹಾರದ ಭದ್ರತೆಗಾಗಿ ಆರೋಪಿತನು ಆತನ ಬಳಿ ಒಂದು ಚಕ್ಕನ್ನು ಕೊಟ್ಟಿದ್ದನು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಪಿ-1 ನೇದನ್ನು ತೋರಿಸಿ ಅದರಲ್ಲಿ ರತ್ನಮ್ಮ ಎಂದು ಬರೆದ ಕೈಬರವಣಿಗೆ ಮತ್ತು ಉಳಿದ ಅಕ್ಷರಗಳ ಕೈ ಬರವಣಿಗೆ ಬೇರೆ ಬೇರೆ ಮಾದರಿ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

2. ಚಕ್ಕುಗಳಲ್ಲಿ ಯಾವುದಾದರೂ ತಿದ್ದುಪಡಿಗಳಿದ್ದಲ್ಲಿ ಆ ಕುರಿತು ಸಂಬಂಧಪಟ್ಟ ವ್ಯಕ್ತಿಯ ಸಹಿ ಇಲ್ಲದೇ ಇದ್ದರೆ ಬ್ಯಾಂಕ್ ಗಳು ಅಂತಹ ಚಕ್ಕುಗಳನ್ನು ಸ್ವೀಕರಿಸುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆ ತಿದ್ದುಪಡಿಗಳ ಕುರಿತು ಚೋಟಾ ಸಹಿ ಇದ್ದರೆ ಸ್ವೀಕರಿಸುತ್ತಾರೆ ಎಂದು ನುಡಿಯುತ್ತಾರೆ. ಅಂತಹ ಚೋಟಾ ಸಹಿಯನ್ನು ಆ ಚಕ್ಕು ಯಾರಿಗೆ ಸಂಬಂಧಿಸಿರುತ್ತದೆಯೋ ಅಂತಹ ವ್ಯಕ್ತಿ ಮಾಡಬೇಕಾಗಿರುತ್ತದೆ.

3. ನಾನು ಮತ್ತು ನನ್ನ ಅಳಿಯ ರಾಜು ಸೇರಿ ಭದ್ರತೆಗಾಗಿ ಕೊಟ್ಟಿದ್ದ ಚಕ್ಕನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಬ್ಯಾಂಕಿನ ಖಾತೆದಾರರು ತಮ್ಮ ಆಧಾರ್ ಕಾರ್ಡ್ ನ್ನು ಆ ಖಾತೆಗೆ ಲಿಂಕ್ ಮಾಡಿಸದೇ ಇದ್ದಲ್ಲಿ ಅವರ ಬ್ಯಾಂಕ್ ಖಾತೆಯು ಬ್ಲಾಕ್ಡ್ ಆಗುತ್ತದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ.

4. ಸಾಕ್ಷಿಗೆ ಪುನಃ ನಿಪಿ-1 ನೇದನ್ನು ತೋರಿಸಿ ಅದರಲ್ಲಿ ನಮೂದಾಗಿರುವ ದಿನಾಂಕದ ಕಲಂ ನಲ್ಲಿ 3 ಇದುದ್ದನ್ನು 5 ಎಂದು ತಿದ್ದುಪಡಿ ಮಾಡಲಾಗಿದೆ ಎಂದು ಸೂಚಿಸಿದ ಪ್ರಶ್ನೆಗೆ

ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಆ ರೀತಿ ಆದ ತಿದ್ದುಪಡಿಯ ಕುರಿತು ಆರೋಪಿಯ ಚೋಟಾ ಸಹಿ ಇರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ತಿದ್ದುಪಡಿಯ ಕುರಿತು ಬ್ಯಾಂಕ್ ಮ್ಯಾನೇಜರನ್ನು ಸಾಕ್ಷಿ ಮಾಡಿಸುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

5. ಆರೋಪಿತನು ನನಗೆ ಪಾವತಿಸಬೇಕಾದ ಯಾವುದೇ ಮೊತ್ತವು ಬಾಕಿ ಇರುವುದಿಲ್ಲ, ಆ ಕಾರಣ ಆರೋಪಿತನು ಎಂದಿಗೂ ನನಗೆ ನಿಪಿ-1 ರ ಚೆಕ್ಕನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಹೀಗಿದ್ದರೂ ನಾನು ಮತ್ತು ನನ್ನ ಅಳಿಯ ರಾಜು ಸೇರಿ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.